“ಪ್ರಯಾರಿಟೀಸಾ...” ಎಂದು ಒಂದು ನಿಮಿಷ ಮೌನವಾಗಿ ಮತ್ತೆ ಛಕ್ಕನೆ ತಲೆ ಎತ್ತಿ, “ನಂದೊಂದು ಕಂಡಿಷನ್ ಇದೆ. ಮದ್ವೆಗೆ ಮೊದ್ಲೆ ಒಂದು ಒಪ್ಪಂದಕ್ಕೆ ರುಜು ಹಾಕಬೇಕು. ಅಕಸ್ಮಾತ್ ಡಿವೋರ್ಸ್ ಆದ್ರೆ ಅಲಿಮನಿ ಕೇಳಬಾರದು, ಮೂರು ಜನಕ್ಕೆ ಪರಿಹಾರ ಕೊಟ್ಟು ಕೊಟ್ಟು ನಾನು ಬರ್ಬಾದ್ ಆಗಿಬಿಟ್ಟಿದೀನಿ. ಆದ್ರಿಂದ... ಮದುವೆ ಕ್ಲಿಕ್ ಆದ್ರೆ ಸರಿ. ಇಲ್ಲಾಂದ್ರೆ ಓಕೆ... ಗುಡ್ ಬೈ. ಕರೆಕ್ಟಲ್ಲವಾ... ಇಷ್ಟಕ್ಕೂ ಇದೇನೂ ಹೊಸದಲ್ಲ ಬಿಡಿ. ಬೇರೆ ದೇಶಗಳಲ್ಲೆಲ್ಲಾ ಈ ನಡುವೆ ಈ ಥರ ಅಗ್ರಿಮೆಂಟ್ ಮಾಡ್ಕೋತಾರೆ... ಕಂಡಿಷನ್ ಓಕೆ ಅಲ್ವಾ...” ಎಂದ. ಒಂದು ಕ್ಷಣ ಕಕಮಕ ಹಿಡಿದಂತಾಯ್ತು... “ಅಲ್ಲಾ ಕಣ್ರಿ ಇನ್ನೂ ಹುಡುಗೀನೇ ನೋಡಿಲ್ಲ. ಆಗ಼್್ಲೇ ಅಪಸ್ವರ... ಅಲಿಮನಿ, ಡಿವೋರ್ಸ್ ಅಂತ ಇದ್ಯಾಕೋ ನಂಗೆ ಹಿಡಿಸಿಲ್ಲಪ್ಪ” ಎಂದೆ.

“ಅಯ್ಯೋ... ಅದ್ರಲ್ಲೇನಿದೆ. ಪ್ರಾಕ್ಟಿಕಲ್ ಆಗಿರ್ಬೇಕಪ್ಪ. ನಾನು ನನ್ನ ನಿಲುವನ್ನು ಸ್ಪಷ್ಟವಾಗಿ ಮೊದಲೇ ಹೇಳಿಬಿಟ್ಟಿದ್ದೀನಿ. ಆಮೇಲೆ ಇನ್ನೊಂದು ಕ್ಲಿಯರ್ರಾಗಿ ಹೇಳ್ತೀನಿ. ನಾನು ಓಡಾಡೋದೆಲ್ಲ ಹೈ ಸೊಸೈಟಿನಲ್ಲಿ. ನಂಗೆ ವೀಕೆಂಡ್ ಪಾರ್ಟಿಗಳು, ಲೇಟ್‌ನೈಟ್ ಪಾರ್ಟಿಗಳು ತುಂಬಾ ಕಾಮನ್ನು, ಆ ಮೇಲೆ ಇಲ್ಯಾವುದಾದ್ರೂ ಗೂಶ್ಬುನ ನಂಗೆ ಕಟ್ಟಿ ಆ ಕಾರಣಕ್ಕೆ ಡಿವೋರ್ಸ್ ಆದ್ರೆ ನಾನು ಜವಾಬ್ದಾರ ಅಲ್ಲ” ಎಂದ ನಗುತ್ತಾ.

“ಹಾಗಾದ್ರೆ ನೀವು ದೊಡ್ಡ ಬೂಜ್ ಪ್ರಜೇನಾ?” ಎಂದೆ ಮುಖ ಕಿವಿಚುತ್ತಾ.

“ಇದ್ಯಾಕ್ರಿ ಹಿಂಗೆ ಮುಖ ಮಾಡ್ತೀರ. ನಾನು ಕುಡುದ್ರೆ ನಿಮ್ಗೇನು ಅಂತ? ಅದನ್ನೆಲ್ಲ ಯೋಚಿಸ್ಬೇಕಾದ್ದು ನನ್ನ ಕಟ್ಟಿಕೊಳ್ಳೋ ಹುಡುಗಿ. ಇನ್ನೂ ಒಂದು ಹುಡುಗಿ ಫೋಟೊನೂ ತೋರಿಸಿಲ್ಲ... ಆಗ್ಲೇ ನನ್ನ ಬಗ್ಗೆ ಹಂಗಾ ಹಿಂಗಾ ಅಂತಾ ಕಾಮೆಂಟ್ ಹೊಡೀತೀರಲ್ಲ” ಎಂದ ಮುನಿದು. ನಂಗೂ ಈ ಕಮಂಗಿಯೊಂದಿಗಿನ ಮಾತುಕತೆ ಸಾಕೆನ್ನಿಸಿತ್ತು.

“ಸರಿ. ನಿಮ್ಗೆ ಡಿವೋರ್ಸಿ, ವಿಡೋ ಯಾರಾದ್ರೂ ಪರ್ವಾಗಿಲ್ಲ ತಾನೆ” ಎಂದೆ ಮಾತು ಮುಗಿಸುವವಳಂತೆ.

“ಅಯ್ಯೋ... ಅದ್ಹೆಂಗ್ರಿ ಆಗತ್ತೆ? ನಂಗದೆಲ್ಲ ಸೆಟ್ಟಾಗಲ್ಲ. ಈ ವಾಂಟ್ ಟೂ ಮ್ಯಾರಿ ಯೆ ವರ್ಜಿನ್” ಎಂದು ಪಕಪಕನೆ ನಕ್ಕುಬಿಟ್ಟ. ನನ್ನ ಸಹನೆಯ ಕಟ್ಟೆ ಒಡೆದು ಸಿರ್ರನೆ ಸಿಟ್ಟು ತಲೆಗೇರಿ ಕಂಪಿಸುತ್ತಾ,

“ಹೌ ಡೇರ್ ಯೂ ಟಾಕ್ ಲೈಕ್ ದಿಸ್. ನಾವಿಲ್ಲಿ ಮಾಡಿಸೋದೇ ರೀಮ್ಯಾರೇಜ್. ಜೀವನ

**ಕರಾರುವಾಕ್ಕಾಗಿ ಸಂಜೆ ನಾಲ್ಕಂದರೆ ನಾಲ್ಕು ಗಂಟೆಗೇ ಬಂದು ನನ್ನೆದುರು ಕುಳಿತ. ಅಲ್ಲಿದ್ದ ಇನ್ನೊಬ್ಬ ಕ್ಲೈಂಟನ್ನು ಕಳುಹಿಸಿ, ಇವನಿಗಾಗಿ ಮಾಡಿಟ್ಟುಕೊಂಡಿದ್ದ ಫೈಲ್‌ಗಳನ್ನು ಲ್ಯಾಪಿಯಲ್ಲಿ ತೆರೆದು ತೋರಿಸಿದೆ. ‘ಇವಳು ಪ್ರತಿಮಾ ಅಂತ. ಮೂವತ್ತೆರೆಡು ವರ್ಷ ಮೂರು ವರ್ಷದ ಹೆಣ್ಣು ಮಗುವಿದೆ. ಪರವಾಗಿಲ್ವ...’ ಎಂದೆ.**